## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 690/2022

ಸಾಕ್ಷಿಗೆ ದಿನಾಂಕ 24-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 5 P.W.: 5

| | | |
|---|---|---|
| ಹೆಸರು | : | ರತ್ನಾನಾಯ್ಕ |
| ತಂದೆಯ ಹೆಸರು | : | ಕಸನ್ಯಾನಾಯ್ಕ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಕೋಗಳಿ ತಾಂಡ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಸನ್ 2005 ರಿಂದ 2025 ರವರೆಗೆ ಮಾಲವಿ ಗ್ರಾಮ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈಗ್ಗೆ 2-3 ವರ್ಷದ ಹಿಂದೆ ನಾನು ಜಮೀನಿಗೆ ಹೋಗಿ ಬರುತ್ತಿರುವಾಗ ಬಸ್ ನಿಲ್ದಾಣದ ಪಕ್ಕದಲ್ಲಿ ಗ್ರಂಥಾಲಯದ ಹತ್ತಿರ ಜನರ ಗುಂಪು ಸೇರಿತ್ತು ಆಗ ಪೋಲೀಸರು ನನಗೆ ಕರೆದು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ತೋರಿಸಿ ಇವರು ನಿಮ್ಮ ಊರಿನವರಾ ಅಂತಾ ಕೇಳಿದ್ದು ನಾನು ಹೌದು ಅಂತಾ ಉತ್ತರಿಸಿರುತ್ತೇನೆ. ಸದರಿಯವರು ಗ್ರಂಥಾಲಯದಲ್ಲಿ ಕುರ್ಚಿ ಮತ್ತು ಗಡಿಯಾರ ಕಳುವು ಮಾಡಿರುತ್ತಾರಂತಾ ನನಗೆ ಹೇಳಿದರು. ಮುಂದೇನಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸದರಿ ಕಳುವಾದ ಚೇರು ಮತ್ತು ಗಂಡಿಯಾರವನ್ನು ನಾನು ನೋಡಿದರೆ ಗುರುತಿಸುತ್ತೇನೆ ಮತ್ತು ಅವುಗಳನ್ನು ಈಗಾಗಲೇ ಮು ಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ26-07-2022 ರಂದು ಸಂಜೆ 5 ಗಂಟೆ ಸುಮಾರಿಗೆ ಚಾಸಾ-1 ರವರು ನನಗೆ ನಮ್ಮ ಗ್ರಾಮ ಪಂಚಾಯ್ತಿ ಸರಹದ್ದಿನ ಕೋಗಳಿ ತಾಂಡದ ಸಾರ್ವಜನಿಕ ಗ್ರಂಥಾಲಯದ ಬಾಗಿಲು ಮುರಿದ ಬಗ್ಗೆ ಮಾಹಿತಿ ಬಂದಿದ್ದು ಹೋಗೋಣ ಅಂತಾ ಹೇಳಿ ನನ್ನನ್ನು ಕರೆದುಕೊಂಡು ಕೋಗಳಿ ತಾಂಡದ ಗ್ರಂಥಾಲಯದ ಹತ್ತಿರ ಹೋಗಿರುತ್ತೇವೆಂದರೆ ಸರಿಯಲ್ಲ. ಚಾಸಾ-4 ರವರು ನಾನು

ಮತ್ತು ಚಾಸಾ-1 ರವರು ಸೇರಿಕೊಂಡು ನೋಡಲಾಗಿ  ಯಾರೋ ಗ್ರಂಥಾಲಯದ ಕಟ್ಟಿಗೆ ಬಾಗಿಲು ಮುರಿದಂತೆ ಕಂಡುಬಂತು ನಾವೆಲ್ಲರೂ ಒಳಗೆ ಹೋಗಿ ನೋಡಲಾಗಿ ಅಲ್ಲಿಟ್ಟಿದ್ದ 15 ಕಬ್ಬಿಣದ ಚೇರುಗಳು ಹಾಗೂ ಗೋಡೆ ಗಡಿಯಾರ ಒಟ್ಟು ರೂ.10 ಸಾವಿರ ಮೌಲ್ಯದ ವಸ್ತುಗಳನ್ನು ಯಾರೋ ಕಳುವು ಮಾಡಿಕೊಂಡು ಹೋಗಿರುತ್ತಾನಂತಾ ವಿಚಾರ ತಿಳಿಯಿತೆಂದರೆ ಸರಿಯಲ್ಲ ಈ ಬಗ್ಗೆ ಚಾಸಾ-1 ರವರು ದಿಃ27-07-2022 ರಂದು ರಾತ್ರಿ 10 ಗಂಟೆಗೆ ಇಟಿಗಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನಂತರ ಇಟಿಗಿ ಪೋಲೀಸರು ಆರೋಪಿತರನ್ನು ನನಗೆ ತೋರಿಸಿ ಅವರೇ ಸದರಿ ಗ್ರಂಥಾಲಯದಲ್ಲಿ ಕಳ್ಳತನ ಮಾಡಿರುತ್ತಾರೆಂದು ಹೇಳಿರುತ್ತಾರೆ ಸದರಿ ಆರೋಪಿತರನ್ನು ವಿಚಾರಿಸಲಾಗಿ ಆರೋಪಿತರು ತಾವೇ ಕಳ್ಳತನ ಮಾಡಿರುತ್ತೇವಂತಾ ಪೋಲೀಸರ ಮುಂದೆ ನಮ್ಮ ಸಮಕ್ಷಮ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ಚೇರುಗಳನ್ನು ಮತ್ತು ಗಡಿಯಾರವನ್ನು ಪ್ರಾಥಮಿಕ ಶಾಲೆಯ ವಾಟರ್ ಫಿಲ್ಟರ್ ಹತ್ತಿರ ಬಚ್ಚಿಟ್ಟಿರುತ್ತೇವಂತಾ ತಿಳಿಸಿದರೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ದಿಃ 28-07-2022 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರು ನಿಮ್ಮ ಊರಿನವರಾದ ಕಾರಣ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿತರ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಸದರಿ ಮು ಮಾ-1 ಮತ್ತು 2ನ್ನು ಯಾರು ಕಳುವು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ಆರೋಪಿತರೇ ಮು ಮಾಲುಗಳನ್ನು ಕಳುವು ಮಾಡಿರುತ್ತಾರಂತಾ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ